ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 1

ಸಂಖ್ಯೆ: ಇ–ಆಡಳಿತ ಶಿಕ್ಷಕರ ಮಾಹಿತಿ 01/2017–18 ದಿನಾಂಕ: **02-05-2017**

**ವಿಶೇಷ ಗಮನಕ್ಕಾಗಿ**

## ಸುತ್ತೋಲೆ

ವಿಷಯ: ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಿಕ್ಷಕರ ಸೇವಾ ಮಾಹಿತಿಗಳನ್ನು ನಮೂನೆಗಳಲ್ಲಿ ಮಾಹಿತಿಗಳನ್ನು ಭರ್ತಿ ಮಾಡುವ ಬಗ್ಗೆ

ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಮ ಸಂಖ್ಯೆ ದಿನಾಂಕ: 20.04.2017

ಈ ಕಛೇರಿಯಿಂದ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಮಾಹಿತಿಗಾಗಿ ವಿತರಿಸಿದ ನಮೂನೆಗಳ ಹಿಂಬಾಗದಲ್ಲಿ ಶಿಕ್ಷಕರ ಸೇವಾ ನಮೂನೆಯಲ್ಲಿ ಶಿಕ್ಷಕರುಗಳು ಸೇವಾ ಮಾಹಿತಿಗಳನ್ನು ಭರ್ತಿ ಮಾಡುವಾಗ ನಮೂನೆಯ ಹಿಂಬಾಗದಲ್ಲಿರುವ ಅನುಬಂಧಗಳಲ್ಲಿ ನಮೂದಿಸಿದ ಸೂಕ್ತ ಕೋಡ್ ಸಂಖ್ಯೆಯನ್ನು ನಮೂದಿಸಲು ಸೂಚಿಸಲಾಗಿತ್ತು.

ಅದರಂತೆ, **ಪ್ರತಿ ಶಿಕ್ಷಕರು ನಮೂನೆಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ, ಸೂಕ್ತ ಕೋಡ್ ಸಂಖ್ಯೆಯನ್ನು ನಮೂನೆಯಲ್ಲಿ ನಮೂದಿಸುವುದರ ಜೊತೆಗೆ, ನಮೂನೆಯ ಹಿಂಬಾಗದಲ್ಲಿರುವ ಅನುಬಂಧಗಳಿಂದ ಬಳಸಿದ ಸೂಕ್ತ ಕೋಡ್ ಹಾಗೂ ವಿಷಯಗಳನ್ನು ಸೇರಿಸಿಕೊಂಡು ವರ್ತುಲವನ್ನು ತಪ್ಪದೇ ಮಾಡಲು ಈ ಮೂಲಕ ಸೂಚಿಸಿದೆ.** ಶಿಕ್ಷಕರಿಂದ ಭರ್ತಿ ಮಾಡಿದ ನಮೂನೆಗಳನ್ನು ವಾಪಸ್ಸು ಪಡೆಯುವಾಗ ಸಂಬಳ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳು (D.D.O's) ಮುಖ್ಯ ಶಿಕ್ಷಕರು/ಕ್ಷೇತ್ರಶಿಕ್ಷಣಾಧಿಕಾರಿಗಳು ಈ ಅಂಶವನ್ನು ಗಮನಿಸಿಕೊಂಡು ವಾಪಸ್ಸು ಪಡೆಯವುದು.

ಜಂಟಿ ನಿರ್ದೇಶಕರು (ಆಡಳಿತ)

**ಇವರಿಗೆ**

1. ನಿರ್ದೇಶಕರು, ಎಸ್.ಎಸ್.ಎ./ ಆರ್.ಎಂ.ಎಸ್.ಎ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
2. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
4. ಸಂಬಂದಪಟ್ಟ ಎಲ್ಲಾ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
6. ಕಛೇರಿ ಪ್ರತಿ.